Sri SIDDAIAH KASIMATH.—How many acres of Government land have already been distributed to the Depressed Class people up till now?

ಶ್ರೀ ಎಂ. ವಿ. ಕೃಷ್ಣಪ್ಪ.—ನನಗೆ ಗೊತ್ತಿರುವ ಹಾಗೆ ಸುಮಾರು ಆರು ಲಕ್ಷ ಎಕರೆಗಳಷ್ಟು ಜಮೀನನ್ನು ಸಂಸ್ಥಾನಾಮೆಳೆ ಭೂಮಿ ಇಲ್ಲದವರಿಗೆ ಹಂಚಬೇಕೆಂದು ಒಂದು ಅಂದಾಜು ಇದೆ. ಇದನ್ನು ಸಾಧ್ಯವಾದಷ್ಟು ಬೇಗ ಹಂಚಬೇಕು ಎಂದು ನಿರ್ಧಾರ ಮಾಡಿ ಡೆಪ್ಯುಟಿಕಮಿಷನರುಗಳಿಗೂ ತಿಳಿಸಲಾಗಿದೆ. ಅದರಂತೆ ಸಾಗುವಳಿ ಚೀಟಿ ದಾನಮಾಡಬೇಕೆಂದು ಮೊದಲು ಜಾಮರಾಜನಗರದ ತಾಲ್ಲೂಕಿನರ್ಲೆಲ್ಲ ಪ್ರಾರಂಭ ಮಾಡಿಯಾಯಿತು. ನಾನೂ ಕೂಡ ಬಳ್ಳಾರಿಯ ಕೆಲವು ಭಾಗಗಳಲ್ಲಿ ಭೂಮಿ ಹಂಚಿ ಬಂದಿದ್ದೇನೆ. ಇದುವರೆಗೆ ಸುಮಾರು ಒಂದೂವರೆ ಲಕ್ಷ ರೂಪಾಯಿಗಳಷ್ಟು ಭೂಮಿಯನ್ನು ಹಂಚಲಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಪುನರುಚ್ಚಾರಣೆ ಮಾಡುತ್ತಾ ಇದ್ದೇನೆ. ಸವರ್ಣೀಯರಲ್ಲಿಯೂ ಹರಿಜನರಿಗಿಂತ ಬಡವರಿದ್ದಾರೆ. ಆದ್ದರಿಂದ ಕನ್‌ಸೆಷನ್ ತೋರಿಸುವುದಕ್ಕೆ ಸರಕಾರದವರು ಯಾವ ಅಳತೆಗೋಲನ್ನು ಇಟ್ಟುಕೊಂಡಿದ್ದಾರೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಡ ಹರಿಜನರಿಗೂ, ಬೇರೆ ಬಡವರಿಗೂ ವ್ಯತ್ಯಾಸವಿಲ್ಲದಿದ್ದರೂ, ಸೋಶಿಯಲ್ ಜಸ್ಟೀಸ್ ಮತ್ತು ಎಕನಾಮಿಕ್ ಜಸ್ಟೀಸ್ ಅಂತ ಎರಡು ಜಸ್ಟೀಸುಗಳು ಇವೆ. ಹರಿಜನರಿಗೆ ಎರಡು ಜಸ್ಟೀಸುಗಳನ್ನೂ ದೊರಕಿಸಿ ಕೊಡಬೇಕು. ಬೇರೆಯವರಿಗೆ ಎಕನಾಮಿಕ್ ಜಸ್ಟೀಸ್ ಮಾಡಬೇಕೆಂದು ಸರಕಾರ ಯೋಚನೆ ಮಾಡುತ್ತಾ ಇದೆ.

ಶ್ರೀ ಗೋಪಾಲ ಸಾರೆನ್ನ.—ಹರಿಜನರಿಗೆ ಶೇಕಡ 50 ರಷ್ಟು ಜಮೀನು ಕಾದಿರಿಸಲಾಗಿದೆ ಎಂದು ಹೇಳಿದಿರಿ. ಪಟ್ಟಣಗಳಲ್ಲದ್ದು ಸುಧಾರಿತರಾಗಿ ಸ್ವಲ್ಪ ಮುಂದೆ ಬಂದಿರುವ ಹರಿಜನರು ದರಖಾಸ್ತು ಕೇಳುವುದಕ್ಕೆ ಅವಕಾಶವಿದೆ, ಗ್ರಾಮಗಳಲ್ಲಿ ಹಿಂದುಳಿದಿರುವವರಿಗೆ ಜಮೀನು ಮಾಡಿಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ಅವರ ಹೆಸರು ಉಪಯೋಗಿಸಿ ಇತರರು ಜಮೀನು ಮಾಡಿಕೊಳ್ಳದಂತೆ, ಸರಕಾರದವರು ಏನಾದರೂ ನಿರ್ದಿಷ್ಟ ಯೋಜನೆ ಮಾಡಿದ್ದಾರೆಯೆ? ಜಮೀನನ್ನು ಆದಷ್ಟು ತೀವ್ರವಾಗಿ ದೊರಕಿಸಲು ಏನು ಕ್ರಮ ತೆಗೆದುಕೊಳ್ಳುತ್ತಾರೆ?

ಶ್ರೀ ಎಂ. ವಿ. ಕೃಷ್ಣಪ್ಪ.—ನಿರ್ದಿಷ್ಟ ಕ್ರಮದ ಪ್ರಕಾರವೆ ಜಮೀನನ್ನು ಹಂಚುತ್ತಾ ಇದೆ. ರ್ಯಾಂಡ್‌ಗ್ಯಾಂಟ್ ರೂಲ್ಸ್ ಈ ಮಾನ್ಯ ಸಭೆಯ ಮುಂದೆ ಬಂದಿತ್ತು. ಆ ರೂಲ್ಸ್ ಪ್ರಕಾರವೆ 50 per cent of the available lands are given to the Harijans. ಹರಿಜನರು ಆ ಗ್ರಾಮದಲ್ಲಿ ಇಲ್ಲದಿದ್ದರೆ ಪಕ್ಕದ ಗ್ರಾಮದಲ್ಲಿರುವ ಹರಿಜನರಿಗೆ ಕೊಡುತ್ತೇವೆ. ರೂಲ್ಸಿಗೆ ವಿರುದ್ಧ ತಹಸೀಲ್ದಾರರು ಕೊಟ್ಟಿದ್ದಾರೆ, ಅಸಿಸ್ಟೆಂಟ್ ಕಮಿಶನರಿಗೆ ಅಪೀಲು ಹೋಗಬಹುದು ಅಸಿಸ್ಟೆಂಟ್ ಕಮಿಶನರೂ ರೂಲ್ಸಿಗೆ ವಿರುದ್ಧವಾಗಿ ಸ್ಯಾಂಕ್ಷನ್ ಮಾಡಿದ್ದರೆ, ಡೆಪ್ಯುಟಿ ಕಮಿಶನರಿಗೆ ಅಪೀಲು ಹೋಗುತ್ತಾರೆ. ಅಲ್ಲಿಯೂ ಸಮರ್ಪಕವಾಗಿಲ್ಲದಿದ್ದರೆ ರೆವಿನ್ಯು ಅಪೆಲೇಟ್ ಟ್ರಿಬ್ಯುನಲ್ಲಿಗೆ ಹೋಗಬಹುದು; ಕಾನೂನಿಗೆ ವಿರುದ್ಧವಾಗಿ ನಡೆದಿದ್ದರೆ ಅಲ್ಲಿ ಕ್ಯಾನ್ಸಲ್ ಮಾಡಿಕೊಡುತ್ತಾರೆ.

ಶ್ರೀ ಎ. ಕೃಷ್ಣಶೆಟ್ಟಿ.—ಸೋಶಿಯಲ್ ಜಸ್ಟೀಸ್ ಮತ್ತು ಎಕನಾಮಿಕ್ ಜಸ್ಟೀಸಿನಲ್ಲಿ ಸರಕಾರದವರು ಯಾವುದನ್ನು ಮುಖ್ಯವಾಗಿ ತೆಗೆದುಕೊಳ್ಳಬೇಕು?

ಶ್ರೀ ಎಂ. ವಿ. ಕೃಷ್ಣಪ್ಪ.—ಹರಿಜನರ ವಿಷಯದಲ್ಲಿ ಎಕನಾಮಿಕ್ ಜಸ್ಟೀಸ್ ಜೊತೆಗೆ ಸೋಶಿಯಲ್ ಜಸ್ಟೀಸನ್ನೂ ತೆಗೆದುಕೊಂಡಿದ್ದಾರೆ, ಅವರಿಗೆ ಎರಡು ಜಸ್ಟೀಸುಗಳನ್ನೂ ಕೊಡಬೇಕು. ಹಿಂದೆ ಬೇರೆಯವರು ಅವರ ಕರ್ತವ್ಯವನ್ನು ಮಾಡದೆ ಇದ್ದದ್ದರಿಂದ ಎರಡನ್ನೂ ಅವರಿಗೆ ಕೊಡಬೇಕು. ಬೇರೆ ಬಡವರಾದರೂ ಕೂಡ ಸೆಕೆಂಡ್ ಕೆಟಿಗೆರಿಯಲ್ಲಿ ಬರುತ್ತಾರೆ.

Total amount of Sales Tax collected in the State from the years 1959-60 to 1962-63

*Q.—809. Sri B. CHANNABYRE GOWDA (Hoskote).—

Will the Government be pleased to state:—

(*a*) the total amount of sales-tax collected in the State from the years 1959-60 to 1962-63 (Yearwar information may be furnished);

(SRI B. CHANNABYRE GOWDA)

(*b*) whether they pay any percentage of collections to the Municipalities for the amount of sales-tax collected in the Municipal Limits ;

(*c*) if not, whether they intend to pay a certain percentage of collections to Municipalities in view of the fact that Government have stopped sanctioning grants to Municipalities ?

A.—Sri B. D. JATTI (Minister for Finance).—

(*a*)

Year		Amount of sales-tax collected Rs. nP.
1959-60	...	6,03,74,510—05
1960-61	...	6,74,17,349—05
1961-62	...	8,02,08,984—52
1962-63	...	9,50,44,940—50

(*b*) No.

(*c*) Sales-tax is an indirect tax. The incidence of tax ultimately falls on the consumers who are residing all over the State and not in any particular Municipal area. The magnitude of the commitments of the State Government in the matter of execution of the plans and other welfare measures do not permit an important source of revenue being shared with local bodies. The Municipalities have been provided with certain other sources of revenue. Government is also giving assistance to Municipalities for certain purposes. No sales-tax law of any State in India provides for such a share to the Municipalities.

ಶ್ರೀ ಬಿ. ಚನ್ನಬ್ಯೈರೇಗೌಡ.—ಏನೂ ಆದಾಯವಿಲ್ಲದೆ ಅನೇಕ ಮುನಿಸಿಪಾಲಿಟಿಗಳು ಸರಕಾರ ಕೊಟ್ಟ ಸಾಲವನ್ನು ತೀರಿಸದೆ ಡಿಫಾಲ್ಟರ್ ಆಗಿರುವುದರಿಂದ, ಸರಕಾರಕ್ಕೆ ಸೇಲ್ಸ್ ಟ್ಯಾಕ್ಸಿನಲ್ಲಿ ಕೋಟ್ಯಂತರ ರೂಪಾಯಿ ಆದಾಯ ಬರುತ್ತಿರುವುದರಲ್ಲಿ ಒಂದು ಭಾಗಂಶವನ್ನು ಮುನಿಸಿಪಾಲಿಟಿಗಳಿಗೆ ಕೊಡಲು ಒಪ್ಪುತ್ತೀರ ?

Mr. SPEAKER.—How does it arise here ?

†Sri B. D. JATTI.—Sir, the municipalities are empowered to collect and impose the house property tax, the octroi tax, etc. Most of the municipalities are not collecting and unnecessarily the Hon'ble member is putting the question.

Mr. SPEAKER.—The Hon'ble member is perfectly correct in asking that question.

Sri B. D. JATTI.—Sir, in the whole country nowhere any share is given from the sales-tax collected.

Sri G. V. GOWDA.—May I know the sales-tax dues in this respect ?

Sri B. D. JATTI.—Sir, generally, in collection of sales-tax there are no dues because at the end or close of the year they appear to be dues but immediately in the next year we will collect it. That is, the arrears due in the current year will be recovered in the beginning of the next year.

Mr. SPEAKER.—He wants the figures.

Sri B. D. JATTI.—We have got figures but just now I cannot give it, Sir. But between 94 and 98 per cent the regular collections.

† Indicates that the remarks or speeches have not been revised by the

ಶ್ರೀ ಎಂ. ಸಿ, ಆಂಜನೇಯ ರೆಡ್ಡಿ.—ಈ 9 ಕೋಟಿ ಆದಾಯವನ್ನು ಕಲೆಕ್ಟ್ ಮಾಡುವುದಕ್ಕೆ ಸ್ಟಾಫ್ ಮೇಲೆ ಎಷ್ಟು ಖರ್ಚಾಗುತ್ತದೆ ?

ಶ್ರೀ ಬಿ. ಡಿ. ಜತ್ತಿ.—ನುವಾರು ಶೇಕಡ 4 ರಷ್ಟು.

ಶ್ರೀ ಎಸ್. ಗೋಪಾಲಗೌಡ.—ಸ್ಥಳೀಯ ಸಂಸ್ಥೆಗಳಿಗೆ, ಲೋಕಲ್ ಬೋರ್ಡುಗಳಿಗೆ, ಪಂಚಾಯತಿಗಳಿಗೆ ಲ್ಯಾಂಡ್ ರೆವಿನ್ಯುವಿನ ಒಂದು ಭಾಗಾಂಶವನ್ನು ಕೊಟ್ಟಂತೆ ಸೇಲ್ಸ್ ಟ್ಯಾಕ್ಸಿನಲ್ಲಿಯೂ ಕೊಡುವುದಕ್ಕೆ ಯೋಚನೆ ಮಾಡುತ್ತೀರ ?

ಶ್ರೀ ಬಿ. ಡಿ. ಜತ್ತಿ.—ಇಲ್ಲ, ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಸಿ. ಆಂಜನೇಯ ರೆಡ್ಡಿ.—ಈಗ ನಿಮಗೆ ಸಾಕಷ್ಟು ಸ್ಟಾಫು ಇಲ್ಲದೆ ಸೇಲ್ಸ್ ಟ್ಯಾಕ್ಸಿನಿಂದ 2 ಆಣೆಯಷ್ಟು ಆದಾಯ ಬರುತ್ತಾ ಇಲ್ಲ. ಮುನಿಸಿಪಾಟಿಗೆ ಕರೆಕ್ಷನ್ ಕಮಿಷನ್ ಕೊಟ್ಟು ವಸೂಲು ಮಾಡಿದರೆ ಜಾಸ್ತಿ ಆದಾಯ ಬರುತ್ತದೆಂದು ಅಭಿಪ್ರಾಯವಿದೆ ? ಹಾಗೆ ಮಾಡುತ್ತೀರ ?

ಶ್ರೀ ಬಿ. ಡಿ. ಜತ್ತಿ.—ಅದು ತಮ್ಮ ಅಭಿಪ್ರಾಯ, ಆ ಅಭಿಪ್ರಾಯವನ್ನು ನರಕಾರ ಒಪ್ಪುವುದಕ್ಕೆ ಆಗುವುದಿಲ್ಲ.

Sri A. KRISHNA SHETTY.—For 1962-63 the amount collected is 9 crores and odd but the demand, I understand, is 11 crores, how is it, Sir ?

Sri B. D. JATTI.—Sir, for the current year I hope I may collect approximately 11 crores.

ಶ್ರೀ ಎಂ. ಸಿ. ಆಂಜನೇಯ ರೆಡ್ಡಿ.—ಈ ಸೇಲ್ಸ್ ಟ್ಯಾಕ್ಸನ್ನು ನರಕಾರದವರು ವಸೂಲು ಮಾಡುವುದರಿಂದ ಹೆಚ್ಚು ಖರ್ಚಾಗುತ್ತದೆ. ಆದ್ದರಿಂದ ವಸೂಲು ಮಾಡುವುದನ್ನು ಸ್ಥಳೀಯ ಸಂಸ್ಥೆಗಳಿಗೆ ಮತ್ತು ಪೌರಸಭೆಗಳಿಗೆ ವಹಿಸಿ, ಸೇಲ್ಸ್ ಟ್ಯಾಕ್ಸ್ ಆದಾಯದ ಒಂದು ಪಾಲನ್ನು ಅವುಗಳಿಗೆ ಕೊಡುವುದನ್ನು ನರಕಾರ ಪರಿಶೀಲನೆ ಮಾಡುತ್ತದೆಯೆ ?

ಶ್ರೀ ಬಿ. ಡಿ. ಜತ್ತಿ.—ಆಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮುನಿಸಿಪಾಲಿಟಿಗಳು ಹಣದ ಮುಗ್ಗಟ್ಟಿನಲ್ಲಿ ಸಿಕ್ಕಿರುವುದರಿಂದ, ಮುನಿಸಿಪಾಲಿಟಿಗಳಿಗೆ ಜನರಲ್ ರೆವಿನ್ಯು ಪೂಲಿನಿಂದ ಸಹಾಯ ಮಾಡುವುದಕ್ಕೆ ಯೋಚನೆ ಮಾಡುತ್ತೀರ ?

Sri B. D. JATTI.—Sir, if the municipalities have not been able to recover the arrears, we will request them to do so. Those who do good work will get financial assistance for the good work.

ಶ್ರೀ ಎಂ. ಸಿ. ಆಂಜನೇಯ ರೆಡ್ಡಿ.—ಈಗ ಸೇಲ್ಸ್ ಟ್ಯಾಕ್ಸಿನಿಂದ ತಮಗೆ ಬರಬೇಕಾದ ಆದಾಯದಲ್ಲಿ ರೂಪಾಯಿಗೆ 2 ಆಣೆ ಬರುತ್ತಿಲ್ಲ ಅನುವುದನ್ನು ಒಪ್ಪುತ್ತೀರ ?

ಶ್ರೀ ಬಿ. ಡಿ. ಜತ್ತಿ.— ಒಪ್ಪುವುದಿಲ್ಲ.

Sri M. Y. GHORPADE.—Sir, is the Government thinking rationlisation in sales-tax with a view to bring about greater uniformity in the levying and collection of sales tax in different States ?

Sri B. D. JATTI.—Sir, that question was discussed in the Conference of the Finance Ministers but it was not agreed to and I do not think our State will agree. This is flexible and the only one income from which we can get more money.

ಶ್ರೀ ಗಂಗಾಧರ ನಾವ್ಲೇಕರ.—ಬೇರೆ ಬೇರೆ ಪ್ರಾಂತ್ಯಗಳಿಂದ ವಸೂಲುಮಾಡಿದ ಇನ್‌ಕಂ ಟ್ಯಾಕ್ಸಿನಲ್ಲಿ ಒಂದು ಶೇರನ್ನು ಕೇಂದ್ರ ಪ್ರಾಂತ್ಯನರಕಾರಗಳಿಗೆ ಕೊಟ್ಟಂತೆ ಈ ನರಕಾರವು ಸೇಲ್ಸ್ ಟ್ಯಾಕ್ಸಿನಲ್ಲಿ ಮುನಿಸಿಪಾಲಿಟಿಗಳಿಗೆ ಅವುಗಳ ಶೇರನ್ನು ಏಕೆ ಕೊಡಬಾರದು ?

Sri B. D. JATTI.—Sir, the Hon'ble Member has not understood the principle on which the State Governments are getting the shares from the Central Government.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ ಇಡೀ ಸಂಸ್ಥಾನದಲ್ಲಿ ಕೇಂದ್ರ ಮತ್ತು ಸಂಸ್ಥಾನಗಳು ಹಾಕಿರುವ ತೆರಿಗೆಗಳ ಭಾರ ಜಾಸ್ತಿಯಾಗಿರುವುದರಿಂದ, ಮುನಿಸಿಪಾಲಿಟಿಗಳಿಗೆ ಜನರ ಮೇಲೆ ಇನ್ನೂ ಹೆಚ್ಚು ತೆರಿಗೆ ಭಾರ ಹಾಕುವುದಕ್ಕೆ ಸಾಧ್ಯವಿಲ್ಲವಾಗಿ ಅಭಿವೃದ್ಧಿ ಕಾರ್ಯಗಳು ನಿಂತು ಹೋಗಿವೆ. ಆದ್ದರಿಂದ ಸೇಲ್ಸ್‌ಟ್ಯಾಕ್ಸಿನಲ್ಲಿ ಸ್ವಲ್ಪ ಭಾಗ ಕೊಡುವುದಕ್ಕೆ ಯೋಚನೆ ಮಾಡುತ್ತೀರ ?

ಶ್ರೀ ಬಿ. ಡಿ. ಜತ್ತಿ.—ಈಗ ವಸೂಲು ಮಾಡಬೇಕಾದ ತೆರಿಗೆಗಳೆಲ್ಲವನ್ನೂ ಮುನಿಸಿಪಾಲಿಟಿಗಳು ವಸೂಲು ಮಾಡುತ್ತಾ ಇಲ್ಲ. ಆ ಲಿಮಿಟ್ ಮುಟ್ಟಲಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಹೇಳುವುದರಲ್ಲಿ ವಿಶೇಷ ಅರ್ಥವಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಹಣಕಾಸಿನ ಮಂತ್ರಿಗಳ ಕಾನ್‌ಫರೆನ್ಸಿನಲ್ಲಿ ಚರ್ಚೆಯಾಯಿತು. Rationalisation ಬಗ್ಗೆ ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳಿದರು. ಈ ನಲಹೆಗಳೇನು ಎನ್ನುವುದನ್ನು ನಭೆಯ ಗಮನಕ್ಕೆ ತರುವುದಕ್ಕೆ ಸಾಧ್ಯವೇ ?

Mr. SPEAKER.—The Hon'ble Member is departing from the main to the subsidiary question. The Hon'ble Member may put a separate question.

Sri G. V. GOWDA.—By accepting rationalisation of sales-tax among Southern States, would not this State stand to benefit ?

Sri B. D. JATTI.—It would not be beneficial to us. It all depends upon production in a particular State. If it is a producing State, it would benefit, not otherwise. If the Hon'ble Member knows the principle behind it, he will follow it.

ಶ್ರೀ ಬಿ. ಭಾಸ್ಕರ್ ಶೆಟ್ಟಿ.—ಮಾರಾಟ ತೆರಿಗೆಯಲ್ಲಿ ಹೇಕಡ 96—97ರಷ್ಟು ವಸೂಲಾಗುತ್ತಿದೆ ಎಂದು ಈಗ ತಾನೇ ಮಂತ್ರಿಗಳು ಹೇಳಿದರು. ಮಂತ್ರಿಗಳು ಮಂಗಳೂರಿಗೆ ಬಂದಾಗ ಅಡಿಕೆ ವ್ಯಾಪಾರಸ್ಥರಿಂದ 30 ಲಕ್ಷ ರೂಪಾಯಿ ಮಾರಾಟ ತೆರಿಗೆ ಬಾಕಿ ಇದೆ ಎಂದು ಹೇಳಿದರು. ಆಗಿನಿಂದ ಏನಾದರೂ ವಸೂಲಾಗಿದೆಯೇ ಅಥವ ಹಾಗೆಯೇ ಇದೆಯೇ ?

ಶ್ರೀ ಬಿ. ಡಿ. ಜತ್ತಿ.—ಸ್ವಲ್ಪ ಕಾನೂನು ವ್ಯತ್ಯಾಸವಿತ್ತು. ನಮಗೂ ಅವರಿಗೂ ಸ್ವಲ್ಪ understanding ಬಂದಿರುವುದರಿಂದ ಈಗ ಬಾಕಿ ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—"No Sales-tax law of any State in India provides for such a share to the municipalities" ಎಂದು ಹೇಳಿದ್ದಾರೆ. ನಮ್ಮ ಘನ ಸರ್ಕಾರದವರು ಒಂದು initiative ಏಕೆ ತೆಗೆದುಕೊಳ್ಳಬಾರದು, ಸ್ವಾಮಿ ?

ಶ್ರೀ ಬಿ. ಡಿ. ಜತ್ತಿ.—ಅವಶ್ಯ ಕಾಣುವುದಿಲ್ಲ ಮತ್ತು ಈಗ ಸದ್ಯಕ್ಕೆ ಮಾಡುವ ವಿಚಾರವೂ ಇಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಕಾನೂನು ಲೆಕ್ಕಾಚಾರ ಎಂದು ಹೇಳಿದ್ದು ಗೊತ್ತಾಗಲಿಲ್ಲ. ಅದನ್ನು ಹೇಳುತ್ತಾರೆಯೇ, ಸ್ವಾಮಿ ?

Sri B. D. JATTI.—I will explain. The section was interpreted in one way by the merchants who were to pay the tax and in a different way by our Department. The matter went up to the High Court and in accordance with their interpretation, the section had to be amended.

ಶ್ರೀ ಎಸ್. ಗೋಪಾಲ ಗೌಡ.—ಅಬ್ಕಾರಿ ನುಂಕ ಮತ್ತು ಮಾರಾಟ ತೆರಿಗೆ ಇವೆರಡನ್ನೂ ವಸೂಲ್ಮಾಡತಕ್ಕ ಒಂದೇ ಇಲಾಖೆ ಮಾಡಬೇಕು ಎಂದು ಕೇಂದ್ರ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆಂದು ಕೇಳಿದೆ. ರಾಜ್ಯ ಸರ್ಕಾರದ ನಲಹೆ ಏನಾದರೂ ಕೇಳಿದ್ದಾರೆಯೇ, ಸ್ವಾಮಿ ?

Sri B. D. JATTI.—The Staff of the Government of Mysore is collecting both the State and Central Sales Tax.

Cases of misappropriation detected in respect of Cement and Iron supplied to Sharavathi Hydro-Electric works.

*Q.—1001. Sri S. GOPALA GOWDA (Thirthahalli).—

Will the Government be pleased to state :—

(*a*) the number of cases of misappropriation detected so far in respect of Cement and Iron supplied to Sharavathi Hydro-Electric Works ;